**ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ. ರವರ ನ್ಯಾಯಾಲಯ,**

**ಪೊನ್ನಂಪೇಟೆ.**

**O.S. No.** 44/2015 **CW**– 1

**ದಿನಾಂಕಃ– 12.08.2026. ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

ಸಾಕ್ಷಿಯ ಹೆಸರು : ಶಿವಾನಂದ ರೆಡ್ಡಿ

ಉದ್ಯೋಗ : ಸರ್ವೆಯರ್

ವಾಸ ಸ್ಥಳ : ಬೆಂಗಳೂರು

**Court commissioner V.C. ಮೂಲಕ ಹಾಜರಾಗಿದ್ದು commissioner ವರದಿ ಕಡತದಲ್ಲಿದ್ದು ಅದು ನ್ಯಾಯಾಲಯದ ದಾಖಲೆ ಆದಕಾರಣ ಅದನ್ನು ಹೊಸದಾಗಿ ನಿಶಾನೆಗೊಳಿಸಿರುವುದಿಲ್ಲ.**

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ. ಎನ್. ಪಿ. ಎಂ ವಕೀಲರಿಂದಃ**

Plain table ರೀತಿ ಸರ್ವೆ ಮಾಡಿರುತ್ತೇನೆ. ಗ್ರಾಮನಕ್ಷೆಯಲ್ಲಿರುವ enlarged ನಕ್ಷೆಗಳ ಆಧಾರ ಸರ್ವೆ ಮಾಡಿರುತ್ತೇನೆ. ಟಿಪ್ಪಣಿ ನಮ್ಮ ಕಚೇರಿಯಲ್ಲಿರುವುದಿಲ್ಲ, ಸ್ಕೆಚ್ ಇರುತ್ತದೆ. ಹದ್ ಬಸ್ತ್ ಸರ್ವೆ ದಾಖಲೆಗಳು ನಮ್ಮ ಕಚೇರಿಯಲ್ಲಿರುತ್ತದೆ. ಗ್ರಾಮಗಳ ಆಧಾರದ ಮೇಲೆ ಹದ್ ಬಸ್ತ್ ಸರ್ವೆ ದಾಖಲೆಗಳು ಇಟ್ಟುಕೊಂಡಿರುತ್ತೇವೆ. ಸರ್ವೆ ನಂ. 62/19 ಮತ್ತು 62/20 ರಲ್ಲಿ ಸರ್ವೆ ಮಾಡುವ ಮುಂಚೆ ಹದ್ ಬಸ್ತ್ ಸರ್ವೆ ಆದ ಬಗ್ಗೆ verify ಮಾಡಿಲ್ಲ. ಹದ್ ಬಸ್ತ್ ಸರ್ವೆಯನ್ನು village map and enlarged ನಕ್ಷೆಗಳ ಆಧಾರ ಮಾಡಲಾಗುವುದು ಎಂದರೆ ಸರಿ. ಇದರಿಂದ ಶೇಕಡಾ 100 ರಷ್ಟು ನಿಖರತೆ ಇರುತ್ತದೆ ಎಂದರೆ ಸರಿ. ನಿ ಡಿ 17 ಹದ್ ಬಸ್ತ್ ಸರ್ವೆ ಎಂದರೆ ಸರಿ.

ಸರ್ವೆ ನಂ. 62/19 ಎ ಮತ್ತು 62/20 ರಲ್ಲಿ ಒಟ್ಟು ವಿಸ್ತೀರ್ಣದ ಅಳತೆ ಮಾಡಿರುತ್ತೇನೆ, ಆದರೆ ಅಳತೆ ನಮೂದಿಸಿಲ್ಲ. ಈ ಅಳತೆ ಹೇಳದ ಕಾರಣ ಯಾರು ಎಷ್ಟು ಸ್ವಾದೀನ ಇದ್ದಾರೆ ಎಂದು ಹೇಳಲು ಬರುವುದಿಲ್ಲ ಎಂದರೆ ಆ ಕಾಲದಲ್ಲಿ ಸ್ವಾದೀನದ ದಾಖಲೆಗಳನ್ನು ಯಾರು ಒದಗಿಸಲಿಲ್ಲ. ಒಟ್ಟು ವಿಸ್ತೀರ್ಣ ನಮೂದಿಸಿದ ಕಾರಣ ವಾಸ್ತವವಾಗಿ ಯಾರು ಎಷ್ಟು ಸ್ವಾದೀನ ಇದ್ದಾರೆ ಎಂದು ಹೇಳಲಾಗುವುದಿಲ್ಲ ಎಂದರೆ

ನಾನು ಒತ್ತುವರಿಯಾದ ಜಾಗವನ್ನು ಅಳತೆ ಮಾಡಿ ಹೇಳಿರುತ್ತೇನೆ. ನಿ ಡಿ 17 ರಂತೆ ಸರ್ವೆ ನಂ. 62/19 ಎ ರಲ್ಲಿ ಯಾವುದೇ ಒತ್ತುವರಿ ಆಗಿಲ್ಲ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಸ್ಥಳದಲ್ಲಿದ್ದ permanent station ಗಳ ಬಗ್ಗೆ ನನಗೆ ಈಗ ನೆನಪಿಲ್ಲದ ಕಾರಣ ಹೇಳಲಾಗುವುದಿಲ್ಲ. ಪ್ರತಿವಾದಿಯ Memo of instruction ನಂತೆ ನಾನು commission ಮಾಡಿಲ್ಲ ಎಂದರೆ ಸರಿಯಲ್ಲ. Permanent station ಗಳನ್ನು ಗುರುತಿಸದ ಕಾರಣ ಅಂದಾಜಿನಲ್ಲಿ ಸರ್ವೆ ನಕ್ಷೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. Margin sheet ದಾಖಲೆಯ ಆಧಾರವಿಟ್ಟು ಅಳತೆ ಮಾಡಿರುತ್ತೇನೆ. Margin sheet ಗೂ ಸ್ಥಳದಲ್ಲಿ ವಾಸ್ತವವಾಗಿ ಇರುವ Permanent station ಗಳಿಗೂ ಸ್ವಲ್ಪ ಪ್ರಮಾಣದ ವ್ಯತ್ಯಾಸ ಇರಬಹುದು. ನಿ ಡಿ 17 ದಾಖಲೆ ನಮ್ಮ ಕಚೇರಿಯ ದಾಖಲೆಯ ಆಧಾರವಿಟ್ಟು ಅಳತೆ ಮಾಡಬೇಕಾಗಿತ್ತು ಎಂದರೆ ಸರಿಯಲ್ಲ. ವಾದಿಯರ ಜೊತೆ ಶಾಮೀಲಾಗಿ ಅವರಿಗೆ ಅನುಕೂಲವಾಗುವ ರೀತಿ ಮಾಡಿಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆ ಕಾರಣಕ್ಕೆ ಎರಡು ಆಸ್ತಿಗಳ ಒಟ್ಟು ಸರ್ವೆ ಮಾಡಿಲ್ಲ ಎಂದರೆ ಸರಿಯಲ್ಲ.

**ಪಾಟೀ ಸವಾಲು ವಾದಿ ಪರ ವಕೀಲರಿಂದ ಃ** – ವಾದಿ ಪರ ವಕೀಲರು ಸಮಯ ಕೋರಿದ್ದು ವಾದಿಯು ಈ Commissioner ವರದಿಗೆ ತಕರಾರು ಸಲ್ಲಿಸಿರುವುದಿಲ್ಲ ಮತ್ತು ಸಮಯ ನೀಡಲು ಸಕಾರಣವು ಇರುವುದಿಲ್ಲ ಆದ್ದರಿಂದ ಇವರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

**Sd/-**

ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ

**OS. No. 44/2015** **CW- 1**

**OS. No. 44/2015** **CW- 1**